

# ಹನಿ ಕಹಾನಿಯಲಿ ಹೀಗಿರಲಿ ಒನಪು...

ಮಳೆಗಾಲಕ್ಕೆ ತಕ್ಕ ಉಡುಗೆ– ತೊಡುಗೆ ನಮ್ಮದಾಗಿದ್ದರೆ ವರ್ಷೆ ತರುವ ಸೊಗಸನ್ನು ಆನಂದದಿಂದ ಆಸ್ವಾದಿಸಬಹುದು.

■ ಸುಮಾ ಬಿ.

ಗೆಳತಿಯ ಮದುವೆಗೆ ಹೋಗಿದ್ದ ಶ್ರೇಯಾ ನೆಲಕ್ಕೆ ತಾಗುವಷ್ಟು ಉದ್ದದ ಲೆಹೆಂಗಾ ತೊಟ್ಟು ಮಿಂಚಿದಳು. ಬೆಳಿಗ್ಗೆ ಮದುವೆಗೆಂದು ತಯಾರಾಗುವಾಗ ಮಳೆ ಬರುವ ಯಾವ ಮುನ್ಸೂಚನೆಯೂ ಇರಲಿಲ್ಲ. ಮಧ್ಯಾಹ್ನದೊತ್ತಿಗೆ ವರ್ಷೆ ಇದ್ದಕ್ಕಿದ್ದಂತೆ ಸುರಿಯತೊಡಗಿದಳು. ಮಳೆ ನಿಂತರೂ ರಸ್ತೆ ಮೇಲೆ ನೀರು ಹರಿಯುತ್ತಿತ್ತು. ಲೆಹೆಂಗಾ ತೊಟ್ಟ ಶ್ರೇಯಾ ಅದನ್ನು ಜತನದಿದ ಕಾಪಿಟ್ಟುಕೊಳ್ಳಲು ಹರಸಾಹಸ ಪಡಬೇಕಾಯಿತು. ಚೌಲ್ಟ್ರಿಯ ಹತ್ತಿರವೇ ಇದ್ದ ಮನೆ ತಲುಪುವಷ್ಟರಲ್ಲಿ ಲೆಹೆಂಗಾ ತಳಭಾಗ ಕೆಸರುಮಯವಾಗಿತ್ತು. ಪ್ರೀತಿಯ ಲೆಹೆಂಗಾ ಸ್ಥಿತಿ ಕಂಡು ಶ್ರೇಯಾ ಮರುಗಿದರೆ, ಅದನ್ನು ಕಂಡ ಅಮ್ಮನಿಂದ ಮಂಗಳಾರತಿ...

ಮಳೆಗಾಲಕ್ಕೆ ತಕ್ಕ ಉಡುಗೆ ನಿಮ್ಮದಾಗಿರದಿದ್ದರೆ ಶ್ರೇಯಾಗೆ ಆದ ಅನುಭವ ನಿಮಗೂ ಆದೀತು...

ಈ ಬಾರಿ ಮುಂಗಾರು ತುಸು ತಡವಾದರೂ ಮೆಲ್ಲಗೆ ಅಡಿ ಇಡುತ್ತಿದೆ. ಎಲ್ಲೆಲ್ಲೂ ಮಳೆ ಹನಿಗಳ ನಿನಾದ, ತಂಪು ವಾತಾವರಣ ಮನಸನ್ನು ಆಹ್ಲಾದವಾಗಿಸಿದೆ. ಬಿಸಿಲಿನ ತಾಪ ದೂರವಾಗಿ ಮಳೆಯ ಮನ್ವಂತರ ಆರಂಭವಾಗುತ್ತಿದೆ. ಇಳೆಗೆ ಹಸಿರ ಹೊದಿಸಲು ಬರುವ ಮಳೆಯ ವೈಭವ ಬಣ್ಣಿಸಲಸದಳ. ಮಳೆ ಆಗಮನದಿಂದ ಭುವಿಯ ಅಂದವೇ ಬದಲಾಗುವಾಗ ನಮ್ಮ ಉಡುಗೆಯ ಶೈಲಿ ಬದಲಿಸಿಕೊಳ್ಳದಿದ್ದರೆ ಹೇಗೆ? ಮಳೆಗಾಲಕ್ಕೆ ತಕ್ಕ ಉಡುಗೆ– ತೊಡುಗೆ ನಮ್ಮದಾಗಿದ್ದರೆ ವರ್ಷೆ ತರುವ ಸೊಗಸನ್ನು ಆನಂದದಿಂದ ಆಸ್ವಾದಿಸಬಹುದು.

ಮಳೆಗಾಲಕ್ಕೆ ತಕ್ಕಂತೆ ನಿಮ್ಮ ವಾರ್ಡ್‌ರೋಬ್‌ನಲ್ಲಿರುವ ಉಡುಪುಗಳನ್ನು ಕೊಂಚ ಬದಲಾಯಿಸಿ. ಉದ್ದದ ಲೆಹೆಂಗಾ, ಗಾಗ್ರಾ, ಸಲ್ವಾರ್, ಸೀರೆಗೆ ಗುಡ್‌ಬೈ ಹೇಳಿ. ಶಾರ್ಟ್ ಉಡುಗೆಗಳಿಗೆ ಹಾಯ್ ಹೇಳಿ.

‘ಮಳೆಗಾಲವೆಂದರೆ ಅದೊಂದು ಖುಷಿ, ಆಹ್ಲಾದದ